# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 409 |
| 2 | ಸದಸ್ಯರ ಹೆಸರು | : | ಶ್ರೀ ಪ್ರತಾಪ ಸಿಂಹ ನಾಯಕ್ ಕೆ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 07-12-2023 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಾದ್ಯಂತ ಬೆಂಗಳೂರು ನಗರವೂ ಸೇರಿದಂತೆ ಬಹುತೇಕ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಪೊಲೀಸ್ ವಸತಿಗೃಹಗಳು ಪಾಳುಬಿದ್ದು ಶಿಥಿಲಾವಸ್ಥೆ ತಲುಪಿ ಅತ್ಯಂತ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಾದ್ಯಂತ ಬೆಂಗಳೂರು ನಗರವೂ ಸೇರಿದಂತೆ ಬಹುತೇಕ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಬಹುತೇಕ ಪೊಲೀಸ್ ವಸತಿಗೃಹಗಳು ಸುಸ್ಥಿತಿಯಲ್ಲಿದ್ದು, ಅದರಲ್ಲಿ ಕೆಲವು ವಸತಿಗೃಹಗಳು ಮಾತ್ರ ಪಾಳುಬಿದ್ದು ಶಿಥಿಲಾವಸ್ಥೆಯಲ್ಲಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಹಳೆಯ ವಸತಿ ಗೃಹಗಳ ನವೀಕರಣ, ಸುಸಜ್ಜಿತ ಹೊಸ ವಸತಿ ಗೃಹಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆಯೇ; | ಶಿಥಿಲಾವಸ್ಥೆಯಲ್ಲಿರುವ ಹಳೆಯ ವಸತಿಗೃಹಗಳನ್ನು ಅನುದಾನದ ಲಭ್ಯತೆಯನ್ನಾಧರಿಸಿ, ಹಂತ ಹಂತವಾಗಿ ನಿರ್ವಹಣಾ ವೆಚ್ಚದಡಿಯಲ್ಲಿ ದುರಸ್ಥಿ/ನವೀಕರಣ ಮಾಡಲಾಗುತ್ತಿದೆ.<br><br>ವಸತಿಗೃಹಗಳು ವಾಸಕ್ಕೆ ಯೋಗ್ಯವಿಲ್ಲದೆ ಶಿಥಿಲಾವಸ್ಥೆಗೆ ತಲುಪಿರುವುದನ್ನು ನೆಲಸಮಗೊಳಿಸಲಾಗುವುದು.<br><br>ಹೊಸ ವಸತಿಗೃಹಗಳ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ/93/ಪಿಬಿಎಲ್/2020, ದಿನಾಂಕ: 15/01/2021 ರಲ್ಲಿ ಪೊಲೀಸ್ ಗೃಹ-2025 ಯೋಜನೆ ಅಡಿ 9,524 ಪೊಲೀಸ್ ಕಾನ್‌ಸ್ಟೇಬಲ್ ವಸತಿ ಗೃಹಗಳು ಹಾಗೂ 510 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಸತಿ ಗೃಹಗಳು ಸೇರಿ ಒಟ್ಟು-10,034 ವಸತಿಗೃಹಗಳ ನಿರ್ಮಾಣ ಕಾಮಗಾರಿಯನ್ನು ಮುಂದಿನ 5 ವರ್ಷಗಳಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಹಂತ-1 ರಲ್ಲಿ 1128 ವಸತಿ ಗೃಹಗಳು, ಹಂತ-2 ರಲ್ಲಿ 996 ವಸತಿಗೃಹಗಳು ಮತ್ತು ಹಂತ-3 ರಲ್ಲಿ 636 ವಸತಿಗೃಹಗಳು ಸೇರಿ ಒಟ್ಟಾರೆಯಾಗಿ 2,760 ವಸತಿಗೃಹಗಳನ್ನು ನಿರ್ಮಾಣ |

| | | |
|---|---|---|
| | | ಮಾಡಲಾಗುತ್ತಿದ್ದು ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. |
| ಇ) | ಬಹುತೇಕ ಪೊಲೀಸ್ ವಸತಿ ಗೃಹಗಳಲ್ಲಿ ಸಾಕಷ್ಟು ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಅವುಗಳ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಯಾವುದೇ ಮೂಲಭೂತ ಸೌಕರ್ಯಗಳ ಕೊರತೆ ಇರುವುದಿಲ್ಲ, ಕೊರತೆ ಕಂಡುಬಂದಲ್ಲಿ ಆಗಿಂದ್ದಾಗೆ ನಿರ್ವಹಣಾ ವೆಚ್ಚದಡಿ ಒದಗಿಸಿರುವ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಪೊಲೀಸ್ ವಸತಿ ಗೃಹಗಳ ಈ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು ಹಾಗೂ ವಿನಿಯೋಗಿಸಿರುವ ಅನುದಾನದ ವಿವರಗಳೇನು? | ಪೊಲೀಸ್ ವಸತಿಗೃಹಗಳ ಈ ಅವ್ಯವಸ್ಥೆಯನ್ನು ಸರಿಪಡಿಸಲು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೊಲೀಸ್ ಗೃಹ–2025 ಯೋಜನೆಯಡಿಯಲ್ಲಿ ರೂ.450.00 ಕೋಟಿ ಗಳನ್ನು ಒದಗಿಸಲಾಗಿರುತ್ತದೆ.<br><br>ಮುಂದುವರೆದು ನಿರ್ವಹಣಾ ವೆಚ್ಚದಡಿಯಲ್ಲಿ ವಸತಿಗೃಹಗಳ ದುರಸ್ಥಿ/ನವೀಕರಣಕ್ಕಾಗಿ ಪ್ರಸ್ತುತ ಸಾಲಿನಲ್ಲಿ ಇದುವರೆವಿಗೂ ರೂ.3,37,42,000/- ಗಳನ್ನು ವಿನಿಯೋಗಿಸಲಾಗಿರುತ್ತದೆ. |

ಹೆಚ್‌ಡಿ 65 ಪಿಬಿವಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು